**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-56003.**

ಸಂಖ್ಯೆ: ಎ8/ಎಸ್‌ಎಸ್‌ಎಲ್‌ಸಿ/ಪೂ.ಪ-21/24/21-22 ದಿನಾಂಕ:18.08.2021

**ಅಧಿಸೂಚನೆ**

ವಿಷಯ:- 2020-21ನೇ ಸಾಲಿನ ಎಸ್.ಎಸ್.ಎಲ್.ಸಿ ಪೂರಕ ಪರೀಕ್ಷೆಯನ್ನು ನಡೆಸುವ ಬಗ್ಗೆ.

ಉಲ್ಲೇಖ:- ಸರ್ಕಾರದ ಆದೇಶ ಸಂಖ್ಯೆ:ಇಪಿ 110 ಎಸ್‌ಎಲ್‌ಬಿ 2021 ದಿನಾಂಕ:16.08.2021.

*******

ಸರ್ಕಾರದ ಆದೇಶ ಸಂಖ್ಯೆ:ಇಪಿ 110 ಎಸ್‌ಎಲ್‌ಬಿ 2021 ದಿನಾಂಕ:16.08.2021ರಂತೆ ಕೋವಿಡ್-19ರ ಹಿನ್ನೆಲೆಯಲ್ಲಿ 2020-21ನೇ ಸಾಲಿನ ಎಸ್.ಎಸ್.ಎಲ್.ಸಿ ಪೂರಕ ಪರೀಕ್ಷೆಯನ್ನು ವಿದ್ಯಾರ್ಥಿಗಳ ಸುರಕ್ಷತಾ ಮತ್ತು ಶೈಕ್ಷಣಿಕ ಹಿತದೃಷ್ಟಿಯಿಂದ ಸರಳೀಕರಿಸಿ, ಸೆಪ್ಟಂಬರ್-2021ರ ಮಾಹೆಯಲ್ಲಿ ಎರಡು ದಿನಗಳಲ್ಲಿ (ಒಂದು ದಿನ ಕೋರ್ ವಿಷಯಗಳು ಮತ್ತು ಮತ್ತೊಂದು ದಿನ ಭಾಷಾ ವಿಷಯಗಳು) ಪರೀಕ್ಷೆಯನ್ನು ನಡೆಸಲು ಸರ್ಕಾರವು ಆದೇಶಿಸಿದೆ.

ಈ ಹಿನ್ನೆಲೆಯಲ್ಲಿ ಸೆಪ್ಟಂಬರ್-2021ರ ಮಾಹೆಯಲ್ಲಿ ನಡೆಯಲಿರುವ ಎಸ್.ಎಸ್.ಎಲ್.ಸಿ ಪೂರಕ ಪರೀಕ್ಷೆಗೆ ಕೆಳಕಂಡ ಕ್ರಮಗಳನ್ನು ಅನುಸರಿಸಿ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ನೋಂದಾಯಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**1. ಪೂರಕ ಪರೀಕ್ಷೆ ನೋಂದಣಿ ಕುರಿತು :-**

2020-21ನೇ ಸಾಲಿನ ಪೂರಕ ಪರೀಕ್ಷೆಗೆ ಕೆಳಕಂಡ ಅಭ್ಯರ್ಥಿಗಳನ್ನು ಮಾತ್ರ ನೋಂದಾಯಿಸಲು ಅವಕಾಶ ಕಲ್ಪಿಸಲಾಗಿದೆ.

a) CCERF (2020-21 ನೇ ಸಾಲಿನ ಮುಖ್ಯ ಪರೀಕ್ಷೆಗೆ ನೋಂದಾಯಿಸಿ ಕೋವಿಡ್-19 ಮತ್ತು ಇತರೆ ಅನಾರೋಗ್ಯದ ಕಾರಣದಿಂದ ಪರೀಕ್ಷೆಗೆ ಗೈರುಹಾಜರಾದ ಮತ್ತು ನೋಂದಾಯಿಸದ ಅರ್ಹ ಶಾಲಾ ವಿದ್ಯಾರ್ಥಿಗಳು ಮಾತ್ರ).

b) CCERR ಏಪ್ರಿಲ್-2019ರ ಮುಖ್ಯ ಪರೀಕ್ಷೆಯಿಂದ ಪ್ರಥಮ ಬಾರಿಗೆ ನೋಂದಾಯಿಸಿ ಅನುತ್ತೀರ್ಣರಾದ ಅರ್ಹ ಪುನರಾವರ್ತಿತ ಶಾಲಾ ವಿದ್ಯಾರ್ಥಿಗಳು.

c) CCEPF (2020-21 ನೇ ಸಾಲಿನ ಮುಖ್ಯ ಪರೀಕ್ಷೆಗೆ ನೋಂದಾಯಿಸಿ ಕೋವಿಡ್-19 ಮತ್ತು ಇತರೆ ಅನಾರೋಗ್ಯದ ಕಾರಣದಿಂದ ಪರೀಕ್ಷೆಗೆ ಗೈರುಹಾಜರಾದ ಅರ್ಹ ಖಾಸಗಿ ಅಭ್ಯರ್ಥಿಗಳು ಮಾತ್ರ)

d) CCEPR ಏಪ್ರಿಲ್-2019ರ ಮುಖ್ಯ ಪರೀಕ್ಷೆಯಿಂದ ಪ್ರಥಮ ಬಾರಿಗೆ ನೋಂದಾಯಿಸಿ ಅನುತ್ತೀರ್ಣರಾದ ಅರ್ಹ ಖಾಸಗಿ ಪುನರಾವರ್ತಿತ ವಿದ್ಯಾರ್ಥಿಗಳು.

e) NSR ಮತ್ತು NSPR ಪುನರಾವರ್ತಿತ ಅಭ್ಯರ್ಥಿಗಳು – 2011ಕ್ಕೂ ಹಿಂದಿನ ಎಸ್.ಎಸ್.ಎಲ್.ಸಿ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ಅರ್ಹ ಪುನರಾವರ್ತಿತ ಶಾಲಾ ಮತ್ತು ಖಾಸಗಿ ಅಭ್ಯರ್ಥಿಗಳು ಹಾಗೂ ಏಪ್ರಿಲ್-2019 ರಿಂದ

ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆಗೆ ಪ್ರಥಮ ಬಾರಿಗೆ ನೋಂದಾಯಿಸಿ ಅನುತ್ತೀರ್ಣರಾದ NSR ಮತ್ತು NSPR ಅಭ್ಯರ್ಥಿಗಳು.

**2. ವಿದ್ಯಾರ್ಥಿಗಳ ನೋಂದಣಿ ವಿಧಾನ :-**

- ಮೇಲಿನ ಕ್ರಮ ಸಂಖ್ಯೆ-1ರಲ್ಲಿ ವಿವರಿಸಿರುವ ಅರ್ಹ ವಿದ್ಯಾರ್ಥಿಗಳನ್ನು ಶಾಲಾ ಮುಖ್ಯೋಪಾಧ್ಯಾಯರು ಮಂಡಳಿಯ https://sslc.karnataka.gov.in/ ಜಾಲತಾಣದ ಶಾಲಾ ಲಾಗಿನ್ ಮೂಲಕ ನೋಂದಣಿ ಮಾಡುವುದು. ಶಾಲಾ ಲಾಗಿನ್‌ನಲ್ಲಿ Registration for September 2021 Examನ್ನು ಕ್ಲಿಕ್ ಮಾಡಿದಾಗ, ಮೂರು ಸಬ್ ಮೆನುಗಳಿರುತ್ತವೆ.

    1. New CCERF Candidate Registration
    2. Update New CCERF Candidate details
    3. Repeater Candidates Registration {CCERR/CCEPR/NSR/NSPR/(CCERF&CCEPF-Absentees of July-2021 Main Exam)}

➢ <u>New CCERF Candidate Registration-</u> ಈ ಮೆನುವನ್ನು ಜುಲೈ-2021ರ ಮುಖ್ಯ ಪರೀಕ್ಷೆಗೆ ನೋಂದಾಯಿಸದ ಶಾಲಾ ವಿದ್ಯಾರ್ಥಿಗಳಿಗೆ ಬಳಸುವುದು. ಸದರಿ ಮೆನುವನ್ನು ಕ್ಲಿಕ್ ಮಾಡಿ, ಎಸ್.ಎ.ಟಿ.ಎಸ್ ಸಂಖ್ಯೆಯನ್ನು (SATS NUMBER) ನಮೂದಿಸಿದಾಗ ಆ ವಿದ್ಯಾರ್ಥಿಯ ವಿವರಗಳು ತೆರೆದುಕೊಳ್ಳುತ್ತದೆ. ವಿದ್ಯಾರ್ಥಿಯ ವಿವರಗಳನ್ನು ಪರಿಶೀಲಿಸಿಕೊಂಡು, ಸದರಿ ವಿದ್ಯಾರ್ಥಿಯ ಭಾಷಾ ಸಂಯೋಜನೆ ಹಾಗೂ ಕೋರ್ ವಿಷಯಗಳನ್ನು ಆಯ್ಕೆ ಮಾಡಿ, ವಿದ್ಯಾರ್ಥಿಗಳ ಭಾವಚಿತ್ರ (60-80kb) ಮತ್ತು ಸಹಿ (20-50kb) ಯನ್ನು ಅಪ್‌ಲೋಡ್ ಮಾಡಿ ಸೇವ್ ಮಾಡುವುದು.

➢ <u>Update New CCERF Candidate details-</u> ಈ ಮೆನುವನ್ನು New CCERF Candidate Registration ನಲ್ಲಿ ಈಗಾಗಲೇ ನೋಂದಾಯಿಸಿದ ಶಾಲಾ ವಿದ್ಯಾರ್ಥಿಗಳ ವಿವರಗಳಲ್ಲಿ ಯಾವುದಾದರು ತಿದ್ದುಪಡಿ ಇದ್ದಲ್ಲಿ, ಎಸ್.ಎ.ಟಿ.ಎಸ್ ಸಂಖ್ಯೆಯನ್ನು (SATS NUMBER) ಬಳಸಿ ತಿದ್ದುಪಡಿ ಮಾಡುವುದು.

➢ <u>Repeater Candidates Registration</u> {CCERR/CCEPR/NSR/NSPR/ (CCERF&CCEPF-Absentees of July-2021 Main Exam)} - ಈ ಮೆನುವನ್ನು ಜುಲೈ-2021ರ ಮುಖ್ಯ ಪರೀಕ್ಷೆಗೆ ನೋಂದಾಯಿಸಿ ಗೈರು ಹಾಜರಾದ ವಿದ್ಯಾರ್ಥಿಗಳು, 2003 ರಿಂದ 2010 ಹಾಗೂ 2019 ರಿಂದ 2021ರ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳನ್ನು ನೋಂದಾಯಿಸಲು ಬಳಸುವುದು. ಸದರಿ ಮೆನುವನ್ನು ಕ್ಲಿಕ್ ಮಾಡಿ, ನೋಂದಣಿ ಸಂಖ್ಯೆಯನ್ನು (REGISTER NUMBER) ನಮೂದಿಸಿದಾಗ ಆ ವಿದ್ಯಾರ್ಥಿಯ ವಿವರಗಳು ಮತ್ತು ಪರೀಕ್ಷೆ ತೆಗೆದುಕೊಳ್ಳಬೇಕಾದ ವಿಷಯಗಳು ಹಾಗೂ ಭಾವಚಿತ್ರ ಮತ್ತು ಸಹಿ ಲಭ್ಯವಿದ್ದಲ್ಲಿ ತೆರೆದುಕೊಳ್ಳುತ್ತದೆ ಪರಿಶೀಲಿಸಿ, ಸೇವ್ ಮಾಡುವುದು. ಭಾವಚಿತ್ರ ಮತ್ತು ಸಹಿ ಇಲ್ಲವಾದಲ್ಲಿ ವಿದ್ಯಾರ್ಥಿಗಳ ಭಾವಚಿತ್ರ (60-80kb) ಮತ್ತು ಸಹಿ (20-50kb)ಯನ್ನು ಅಪ್‌ಲೋಡ್ ಮಾಡಿ ಸೇವ್ ಮಾಡುವುದು.

- 2011 ರಿಂದ ಜೂನ್ 2018ರ ವರೆಗೆ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ 6 ಪ್ರಯತ್ನಗಳು ಮುಕ್ತಾಯಗೊಂಡಿರುವುದರಿಂದ ಸೆಪ್ಟಂಬರ್ 2021ರ ಪೂರಕ ಪರೀಕ್ಷೆಯನ್ನು ತೆಗೆದುಕೊಳ್ಳಲು

ಅವಕಾಶವಿರುವುದಿಲ್ಲ. ಈ ವಿದ್ಯಾರ್ಥಿಗಳು ಮಾರ್ಚ್/ಏಪ್ರಿಲ್-2022ರ ಪರೀಕ್ಷೆಗೆ ಹೊಸದಾಗಿ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಂಡು ಎಲ್ಲಾ 06 ವಿಷಯಗಳ ಪರೀಕ್ಷೆಗೆ ಹಾಜರಾಗಬೇಕಾಗುತ್ತದೆ. ಖಾಸಗಿ ಅಭ್ಯರ್ಥಿ ಪರೀಕ್ಷೆಗೆ ಕುಳಿತುಕೊಳ್ಳಲು ವಿಧಿಸಿರುವ ಷರತ್ತುಗಳನ್ನು ಪಾಲಿಸಬೇಕು.

- 2020-21ನೇ ಸಾಲಿನ ಮುಖ್ಯ ಪರೀಕ್ಷೆಗೆ ನೋಂದಾಯಿಸಿಕೊಂಡ ಅರ್ಹ ಪುನರಾವರ್ತಿತ ಅಭ್ಯರ್ಥಿಗಳು ಕೋವಿಡ್-19 ಅಥವಾ ಇತರೆ ಅನಾರೋಗ್ಯ ಕಾರಣದಿಂದಾಗಿ ಪರೀಕ್ಷೆಗೆ ಗೈರುಹಾಜರಾಗಿದ್ದಲ್ಲಿ, ಅಂತಹ ಪುನರಾವರ್ತಿತ ಅಭ್ಯರ್ಥಿಗಳಿಗೆ ಪ್ರಸ್ತುತ ಇರುವ 06 ಪ್ರಯತ್ನಗಳ ಲೆಕ್ಕಾಚಾರದಿಂದ, ಅಂದರೆ 06 ಪ್ರಯತ್ನಗಳಲ್ಲಿ ಉತ್ತೀರ್ಣರಾಗಬೇಕೆಂಬ ನಿಯಮದಿಂದ ಈ ಪರೀಕ್ಷೆಯ ಒಂದು ಪ್ರಯತ್ನವನ್ನು ಕೈಬಿಡಲಾಗುವುದೆಂದು ಸರ್ಕಾರದ ಆದೇಶ ಸಂಖ್ಯೆ:ಇಪಿ 110 ಎಸ್‌ಎಲ್‌ಬಿ 2021 ದಿನಾಂಕ:18.06.2021ರಲ್ಲಿ ಆದೇಶಿಸಲಾಗಿರುತ್ತದೆ. ಅದರಂತೆ ಜುಲೈ-2021ರ ಮುಖ್ಯ ಪರೀಕ್ಷೆಗೆ 06ನೇ ಪ್ರಯತ್ನವಾಗಿದ್ದಂತಹ (ಅಂತಿಮ ಪ್ರಯತ್ನ) ಅಭ್ಯರ್ಥಿಗಳು, **ಮೇಲಿನ ಕಾರಣದಿಂದಾಗಿ ಪರೀಕ್ಷೆಗೆ ಗೈರುಹಾಜರಾಗಿದ್ದಲ್ಲಿ, ಈ ವಿದ್ಯಾರ್ಥಿಗಳಿಗೆ ಸೆಪ್ಟಂಬರ್-2021ರ ಪೂರಕ ಪರೀಕ್ಷೆಗೆ ಅಂತಿಮ ಪ್ರಯತ್ನವಾಗಿ ಪರೀಕ್ಷೆಗೆ ನೋಂದಾಯಿಸಲು ಅವಕಾಶವಿರುತ್ತದೆ.**
- 2003ಕ್ಕೂ ಹಿಂದಿನ ವರ್ಷಗಳಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳನ್ನು (NSR ಮತ್ತು NSPR) ಪರೀಕ್ಷೆಗೆ ನೋಂದಾಯಿಸಲು ಈ ಹಿಂದೆ ಇದ್ದಂತೆ MSA ಅರ್ಜಿಗಳನ್ನು ಭರ್ತಿ ಮಾಡಿ ಅರ್ಜಿ ಮೂಲಕ ಸಲ್ಲಿಸಬಹುದಾಗಿದೆ. ಈ ವಿದ್ಯಾರ್ಥಿಗಳಿಗೆ ಆನ್‌ಲೈನ್‌ನಲ್ಲಿ ನೋಂದಾಯಿಸಲು ಅವಕಾಶ ಕಲ್ಪಿಸಲಾಗಿರುವುದಿಲ್ಲ. ಇಂತಹ ಅಭ್ಯರ್ಥಿಗಳ ಎಂ.ಎಸ್.ಎ ಫಾರಂನಲ್ಲಿ ವಿದ್ಯಾರ್ಥಿಯ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ 2 ಭಾವಚಿತ್ರಗಳನ್ನು ಅಂಟಿಸಿ ಮುಖ್ಯ ಶಿಕ್ಷಕರು ಧೃಡೀಕರಿಸಿ ಸಲ್ಲಿಸಬೇಕು. ಎಂ.ಎಸ್.ಎ ಅರ್ಜಿಗಳನ್ನು ಪರಿಶೀಲಿಸುವಾಗ ಎಂ.ಎಸ್.ಎ ನಲ್ಲಿರುವ ಶಾಲಾ ಸಂಕೇತವು ತಮ್ಮ ಶಾಲೆಯದೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು. ಈ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ನಿಗದಿತ ಮಂಡಳಿಯ NEFT ಚಲನ್ ಮೂಲಕ ಪಾವತಿಸಿ ಎಂ.ಎಸ್.ಎ ಅರ್ಜಿ, ಭಾವಚಿತ್ರ, ಶುಲ್ಕ ಪಾವತಿಯ ಚಲನ್‌ನೊಂದಿಗೆ ಮಂಡಳಿಗೆ ಸಲ್ಲಿಸುವುದು. ಈ ಮೂರು ಮಾಹಿತಿಗಳಿದ್ದಲ್ಲಿ ಮಾತ್ರ ಅರ್ಜಿಗಳನ್ನು ಪರಿಗಣಿಸಲಾಗುವುದು. ಇಲ್ಲವಾದಲ್ಲಿ ಸದರಿ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ. ಒಂದು ವೇಳೆ ಈ ವಿದ್ಯಾರ್ಥಿಗಳ ಎಂ.ಎಸ್.ಎ ಗಳು ಶಾಲೆಯಲ್ಲಿ ಲಭ್ಯವಿಲ್ಲದಿದ್ದಲ್ಲಿ ಮಂಡಳಿಯ ಆಯಾ ವಿಭಾಗೀಯ ಕಛೇರಿಗಳಿಂದ ಪಡೆದು ಸಕಾಲದಲ್ಲಿ ಸಲ್ಲಿಸುವುದು ಕಡ್ಡಾಯ.
- ಸತತ 6 ಪ್ರಯತ್ನಗಳ ಬಗ್ಗೆ ಈ ಕಛೇರಿಯ ಅಧಿಸೂಚನೆ ಸಂಖ್ಯೆ:ಎ8/ಎಸ್.ಎಸ್.ಎಲ್.ಸಿ.ಅಧಿಸೂಚನೆ/ಜೂನ್-2021/48/2020-21 ದಿನಾಂಕ:19.01.2021 ಮತ್ತು ಮಂಡಳಿಯ ಮಾರ್ಗದರ್ಶಿ ಕೈಪಿಡಿಗಳಲ್ಲಿ ವಿಸ್ತಾರವಾಗಿ ವಿವರಿಸಲಾಗಿದೆ. ಏಪ್ರಿಲ್-2019ರ ಮುಖ್ಯ ಪರೀಕ್ಷೆಯಲ್ಲಿ ಪ್ರಥಮ ಬಾರಿಗೆ ಕುಳಿತು ತೇರ್ಗಡೆಯಾಗದ ಪರೀಕ್ಷಾರ್ಥಿಗಳಿಗೆ ಸೆಪ್ಟಂಬರ್-2021ರ ಪೂರಕ ಪರೀಕ್ಷೆ ಕಡೆಯ ಅವಕಾಶವಾಗಿರುತ್ತದೆ. ಆದ್ದರಿಂದ ನಿಮ್ಮ ಶಾಲಾ/ಕಾಲೇಜುಗಳಲ್ಲಿ ಇಂತಹ ವಿದ್ಯಾರ್ಥಿಗಳಿದ್ದಲ್ಲಿ, ಕಡೆಯ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳುವಂತೆ ತಿಳಿಸಿದೆ. 06 ಪ್ರಯತ್ನಗಳ ನಂತರವೂ ಅನುತ್ತೀರ್ಣರಾದಲ್ಲಿ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಂಡು ಹೊಸದಾಗಿ ಆರು ವಿಷಯಗಳಿಗೂ ಮುಂದಿನ ಮುಖ್ಯ ಪರೀಕ್ಷೆಗೆ ಹಾಜರಾಗಬೇಕಾಗುತ್ತದೆ.

3. **ಪರೀಕ್ಷಾ ಶುಲ್ಕದ ಕುರಿತು :-**

| ಕ್ರಸಂ. | ವಿದ್ಯಾರ್ಥಿಗಳ ವಿವರ | ಶುಲ್ಕದ ವಿವರ |
|---|---|---|
| 1 | 2020-21 ನೇ ಸಾಲಿನ ಮುಖ್ಯ ಪರೀಕ್ಷೆಗೆ ಕೋವಿಡ್-19 ಮತ್ತು ಇತರೆ ಅನಾರೋಗ್ಯದ ಕಾರಣದಿಂದ ಪರೀಕ್ಷೆಗೆ ನೋಂದಾಯಿಸದ ಅರ್ಹ ಶಾಲಾ ವಿದ್ಯಾರ್ಥಿಗಳು ಮಾತ್ರ (CCERF). | ಪರೀಕ್ಷಾ ಶುಲ್ಕ ರೂ.485/- + ರೂ.22/- (ಲ್ಯಾಮಿನೇಷನ್ ಶುಲ್ಕ) **ಒಟ್ಟು ರೂ.507/- (ಪ್ರತಿ ವಿದ್ಯಾರ್ಥಿಗೆ)** |
| 2 | ಪುನರಾವರ್ತಿತ ಅಭ್ಯರ್ಥಿಗಳು (CCERR+CCEPR+NSR+NSPR)<br>1. ಒಂದು ವಿಷಯಕ್ಕೆ<br>2. ಎರಡು ವಿಷಯಕ್ಕೆ<br>3. ಮೂರು ವಿಷಯ ಹಾಗೂ ಮೂರಕ್ಕಿಂತ ಹೆಚ್ಚಿನ ವಿಷಯಗಳಿಗೆ | ಪ್ರತಿ ವಿದ್ಯಾರ್ಥಿಗೆ<br>ರೂ.320/-<br>ರೂ.386/-<br>ರೂ.520/- |

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮಾತ್ರ ಪೂರಕ ಪರೀಕ್ಷೆಯ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ.
- ಕೋವಿಡ್-19 ಮತ್ತು ಇತರೆ ಅನಾರೋಗ್ಯ ಕಾರಣದಿಂದ 2020-21 ನೇ ಸಾಲಿನ ಮುಖ್ಯ ಪರೀಕ್ಷೆಗೆ ನೋಂದಾಯಿಸದ ಸರ್ಕಾರಿ ಪ್ರೌಢ ಶಾಲೆ / ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಶಾಲಾ ವಿದ್ಯಾರ್ಥಿಗಳಾಗಿ (CCERF) ಪ್ರಥಮ ಬಾರಿಗೆ ಎಸ್.ಎಸ್. ಎಲ್.ಸಿ. ಪರೀಕ್ಷೆಗೆ ಹಾಜರಾಗುವ ಎಲ್ಲಾ ವರ್ಗದ ಹೆಣ್ಣುಮಕ್ಕಳಿಗೆ ಮಾತ್ರ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡಿದೆ.
- ಕೋವಿಡ್-19 ಮತ್ತು ಇತರೆ ಅನಾರೋಗ್ಯ ಕಾರಣದಿಂದ 2020-21 ನೇ ಸಾಲಿನ ಮುಖ್ಯ ಪರೀಕ್ಷೆಗೆ ಶಾಲಾ ವಿದ್ಯಾರ್ಥಿಗಳಾಗಿ (CCERF) ಪ್ರಥಮ ಬಾರಿಗೆ ನೋಂದಾಯಿಸದ ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-2ಬಿ ಹಾಗೂ ಪ್ರವರ್ಗ-3ಎ, ಪ್ರವರ್ಗ-3ಬಿ ವ್ಯಾಪ್ತಿಯಲ್ಲಿ ಬರುವ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತೆ ಪೋಷಕರ ವಾರ್ಷಿಕ ಆದಾಯ ಮಿತಿಗೆ ಒಳಪಟ್ಟು ಪರೀಕ್ಷಾ ಶುಲ್ಕ ವಿನಾಯಿತಿ ಕುರಿತು ಈ ಕಛೇರಿಯ ಅಧಿಸೂಚನೆ ಸಂಖ್ಯೆ:ಎ8/ಎಸ್‌ಎಸ್‌ಎಲ್‌ಸಿ.ಅಧಿಸೂಚನೆ/ಜೂನ್-2021/48/2020-21 ದಿನಾಂಕ:19.01.2021ರಲ್ಲಿ ಪುಟ ಸಂಖ್ಯೆ: 12 ಮತ್ತು 13ರಲ್ಲಿ ವಿವರಿಸಿರುವಂತೆ ಕ್ರಮವಹಿಸುವುದು.
- ಸರ್ಕಾರದ ಆದೇಶ ಸಂಖ್ಯೆ:ಇಪಿ 62 ಎಸ್‌ಎಲ್‌ಬಿ 2021 ದಿನಾಂಕ:15.03.2021ರಂತೆ ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ಪೂರಕ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ.
- **2020-21 ನೇ ಸಾಲಿನ ಮುಖ್ಯ ಪರೀಕ್ಷೆಗೆ ನೋಂದಾಯಿಸಿ ಕೋವಿಡ್-19 ಮತ್ತು ಇತರೆ ಅನಾರೋಗ್ಯದ ಕಾರಣದಿಂದ ಪರೀಕ್ಷೆಗೆ ಗೈರುಹಾಜರಾದ CCERF & CCEPF ವಿದ್ಯಾರ್ಥಿಗಳು ಈ ಪೂರಕ ಪರೀಕ್ಷೆಗೆ ನೋಂದಾಯಿಸಿದಲ್ಲಿ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ.**

**ಆನ್‌ಲೈನ್‌ನಲ್ಲಿ ಪರೀಕ್ಷಾ ಅರ್ಜಿಯನ್ನು ನೋಂದಾಯಿಸಲು ಹಾಗೂ NEFT ಚಲನ್ ಮೂಲಕ ಬ್ಯಾಂಕ್‌ಗೆ ಪರೀಕ್ಷಾ ಶುಲ್ಕ ಪಾವತಿಸಲು ನಿಗದಿಪಡಿಸಿದ ದಿನಾಂಕ:-**

| ಕ್ರ ಸಂ | ವಿವರ | ನಿಗದಿಪಡಿಸಿರುವ ದಿನಾಂಕ |
|---|---|---|
| 1 | ಮಂಡಳಿ ಜಾಲತಾಣದ ಶಾಲಾಲಾಗಿನ್ ಮೂಲಕ CCERF, CCEPF, CCERR , CCEPR, NSR ಮತ್ತು NSPR ವಿದ್ಯಾರ್ಥಿಗಳ ಮಾಹಿತಿಯನ್ನು ಅಪ್‌ಲೋಡ್ ಮಾಡಲು **ಪ್ರಾರಂಭ** ದಿನಾಂಕ | 19.08.2021 |
| 2 | ಮಂಡಳಿ ಜಾಲತಾಣದ ಶಾಲಾಲಾಗಿನ್ ಮೂಲಕ CCERF, CCEPF CCERR , CCEPR, NSR ಮತ್ತು NSPR ವಿದ್ಯಾರ್ಥಿಗಳ ಮಾಹಿತಿಯನ್ನು ಅಪ್‌ಲೋಡ್ ಮಾಡಲು ನಿಗದಿಪಡಿಸಿದ **ಅಂತಿಮ** ದಿನಾಂಕ: | 30.08.2021 |
| 3 | ಮಂಡಳಿ ಜಾಲತಾಣದ ಶಾಲಾಲಾಗಿನ್ ಮೂಲಕ CCERF, CCEPF, CCERR , CCEPR, NSR ಮತ್ತು NSPR ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕದ ಚಲನ್ ಮುದ್ರಿಸಿಕೊಳ್ಳಲು ನಿಗದಿಪಡಿಸಿದ ದಿನಾಂಕ: | 31.08.2021 |
| 4 | ಕ್ರಮ ಸಂಖ್ಯೆ-3ರಂತೆ ಚಲನ್ ಮುದ್ರಿಸಿಕೊಂಡು ಬ್ಯಾಂಕ್‌ಗೆ ಜಮೆ ಮಾಡಲು ನಿಗದಿಪಡಿಸಿದ ದಿನಾಂಕ | 02.09.2021 |
| 5 | 2002 ಮತ್ತು ಹಿಂದಿನ ವರ್ಷಗಳ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಪುನರಾವರ್ತಿತ ಅಭ್ಯರ್ಥಿಗಳ (NSR & NSPR) ಪರೀಕ್ಷಾ ಶುಲ್ಕವನ್ನು ಹಳೆಯ ಪದ್ಧತಿಯಂತೆ ಮಂಡಳಿಯ ನೆಫ್ಟ್ ಚಲನ್ ಮೂಲಕ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಾವತಿಸಲು ನಿಗದಿಪಡಿಸಿದ **ಅಂತಿಮ** ದಿನಾಂಕ | 02.09.2021 |
| 6 | **ಕೆಳಕಂಡ ದಾಖಲೆಗಳನ್ನು ಮಂಡಳಿಗೆ ಸಲ್ಲಿಸಲು ನಿಗಧಿಪಡಿಸಿದ ಅಂತಿಮ ದಿನಾಂಕ**<br>• CCERF, CCEPF, CCERR, CCEPR, NSR & NSPR ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನೊಳಗೊಂಡಂತೆ ಶಾಲಾಲಾಗಿನ್‌ನಲ್ಲಿ ಸೃಜಿಸಲಾಗುವ ಚಲನ್ ಬಳಸಿಕೊಂಡು ಶುಲ್ಕ ಪಾವತಿಸಿದ ಮೂಲ ಚಲನ್<br>• 2002 ಮತ್ತು ಹಿಂದಿನ ವರ್ಷಗಳ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಪುನರಾವರ್ತಿತ ಅಭ್ಯರ್ಥಿಗಳ (NSR & NSPR) ಎಂಎಸ್‌ಎ ಮತ್ತು ಹಿಂದನ ಪದ್ಧತಿಯಂತೆ ಮಂಡಳಿ ನೆಫ್ಟ್ ಚಲನ್ ಮೂಲಕ ಶುಲ್ಕ ಪಾವತಿಸಿದ ಮೂಲ ಚಲನ್<br>• ನಾಮಿನಲ್‌ರೋಲ್ ಮತ್ತು ಸಂಬಂಧಿಸಿದ ಇತರೆ ದಾಖಲೆಗಳು | 07.09.2021 |

- ಪರೀಕ್ಷಾರ್ಥಿಗಳ ಪರೀಕ್ಷಾ ಶುಲ್ಕವನ್ನು ಪಾವತಿಸಲು ಮತ್ತು ಆನ್‌ಲೈನ್‌ನಲ್ಲಿ ಅಭ್ಯರ್ಥಿಗಳ ವಿವರಗಳನ್ನು ನೋಂದಾಯಿಸಲು ಮೇಲೆ ನಿಗಧಿಪಡಿಸಿರುವ ದಿನಾಂಕದ ನಂತರ ಜಾಲತಾಣದಲ್ಲಿ ಅಪ್‌ಲೋಡ್ ಮಾಡಲು ಅವಕಾಶವಿರುವುದಿಲ್ಲ.
- ಇತರೆ ಶಾಲೆಯ ವಿದ್ಯಾರ್ಥಿಗಳ ಅರ್ಜಿಗಳನ್ನು ಯಾವುದೇ ಕಾರಣಗಳಿಂದ ತಮ್ಮ ಶಾಲೆಯ ಮುಖೇನ ಸಲ್ಲಿಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.
- 2003ಕ್ಕೂ ಹಿಂದಿನ ಪುನರಾವರ್ತಿತ ಅಭ್ಯರ್ಥಿಗಳು ಪರೀಕ್ಷಾ ಶುಲ್ಕವನ್ನು ನಿಗದಿತ **ಬ್ಯಾಂಕ್ NEFT ಚಲನ್** ಮೂಲಕ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಪಾವತಿಸಿ ಎಂಎಸ್‌ಎ ಪ್ರತಿಯೊಂದಿಗೆ ಮೂಲಚಲನ್ ಪ್ರತಿಯನ್ನು ಮಂಡಳಿಗೆ ಸಲ್ಲಿಸುವುದು.

ಮೇಲೆ ನಿಗದಿಪಡಿಸಿದ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂಬುದನ್ನು ಮತ್ತೊಮ್ಮೆ ಶಾಲಾ ಮುಖ್ಯಸ್ಥರಿಗೆ ಸ್ಪಷ್ಟವಾಗಿ ತಿಳಿಸಿದೆ.

- ಪರೀಕ್ಷಾರ್ಥಿಗಳಿಂದ ಪರೀಕ್ಷಾ ಶುಲ್ಕ ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಸೆಪ್ಟಂಬರ್ 2021ರ ಪೂರಕ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ನಾಮಾಯಾದಿ ಪಟ್ಟಿ (Nominal Roll)ಯನ್ನು Download ಮಾಡುವುದು. ನಂತರ ಶಾಲಾ ಲಾಗಿನ್ ನಲ್ಲಿ ಪರೀಕ್ಷಾ ಶುಲ್ಕದ ಚಲನ್‌ನ್ನು Generate ಮಾಡಿಕೊಂಡು, ಚಲನ್‌ನಲ್ಲಿ ಮುದ್ರಿತವಾದ ಪರೀಕ್ಷಾ ಶುಲ್ಕವನ್ನು ಬ್ಯಾಂಕ್‌ಗೆ ನಿಗಧಿತ ಸಮಯದೊಳಗೆ ಜಮಾ ಮಾಡುವುದು.
- ಶಾಲಾ ಮುಖ್ಯಸ್ಥರು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಶುಲ್ಕವನ್ನು ಮಂಡಳಿ **ಜಾಲತಾಣದಲ್ಲಿ ಚಲನ್ ಜನರೇಟ್ ಮಾಡಿಕೊಂಡು ರಾಷ್ಟ್ರೀಕೃತ ಬ್ಯಾಂಕ್‌ನಲ್ಲೇ ಜಮಾ ಮಾಡಬೇಕು.** ಆನ್‌ಲೈನ್ ಮೂಲಕ ವಿದ್ಯಾರ್ಥಿಗಳ ವಿವರಗಳನ್ನು ನೋಂದಣಿ ಮಾಡಿದ ನಂತರ ನಾಮಯಾದಿ ಪಟ್ಟಿ (Nominal Roll) Download ಮಾಡಿಕೊಂಡು, ಮೂಲ ಬ್ಯಾಂಕ್ ಚಲನ್‌ನೊಂದಿಗೆ **ದಿನಾಂಕ:07.09.2021** ರೊಳಗೆ ಕೆಳಗೆ ವಿವರಿಸಿರುವ ಶಾಖಾಧಿಕಾರಿಗಳಿಗೆ ತಲುಪುವಂತೆ ಕ್ರಮವಹಿಸುವುದು. ಯಾವುದೇ ಕಾರಣಕ್ಕೂ ವಿಭಾಗೀಯ ಕಾರ್ಯದರ್ಶಿಗಳಿಗಾಗಲಿ, ಜಿಲ್ಲಾ ಉಪನಿರ್ದೇಶಕರಿಗಾಗಲಿ ಅಥವಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗಾಗಲಿ ಈ ಅರ್ಜಿಗಳನ್ನು ಸಲ್ಲಿಸಬಾರದು. ಲಕೋಟೆಯ ಮೇಲೆ **ಸೆಪ್ಟಂಬರ್–2021ರ ಎಸ್.ಎಸ್.ಎಲ್.ಸಿ. ಪೂರಕ ಪರೀಕ್ಷೆಯ ಚಲನ್** ಎಂದು ಬರೆಯುವುದು.
- 2003ಕ್ಕೂ ಹಿಂದಿನ ವರ್ಷಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳ (NSR ಮತ್ತು NSPR) ಎಂ.ಎಸ್.ಎ ಮೂಲಕ ಸಲ್ಲಿಸುವ ಪ್ರಸ್ತಾವನೆಯ ಲಕೋಟೆಯ ಮೇಲೆ **ಸೆಪ್ಟಂಬರ್ 2021ರ ಎಸ್.ಎಸ್.ಎಲ್.ಸಿ ಪೂರಕ ಪರೀಕ್ಷೆಯ ಅರ್ಜಿಗಳು** ಎಂದು ಬರೆಯುವುದು ಹಾಗೂ ನಿಮ್ಮ ಜಿಲ್ಲೆಗೆ ಸಂಬಂಧಿಸಿದ ಮಂಡಳಿಯ ಅಧಿಕಾರಿಗಳ ಹೆಸರು ಮತ್ತು ಶಾಖೆಯನ್ನು ಲಕೋಟೆಯ ಮೇಲೆ ತಪ್ಪದೇ ಬರೆಯುವುದು.
- ಮಂಡಳಿ ನಿಗದಿಪಡಿಸಿರುವ ಅಂತಿಮ ದಿನಾಂಕ **"ಸಾರ್ವತ್ರಿಕ ರಜಾ ದಿನ"** ಎಂಬುದಾಗಿ ಘೋಷಿಸಿದ್ದಲ್ಲಿ ಮಾರನೇ ಕೆಲಸದ ದಿನವನ್ನು ಕೊನೆಯ ದಿನಾಂಕವೆಂದು ಪರಿಗಣಿಸುವುದು. ಈ ಕೆಳಗೆ ನಮೂದಿಸಿರುವ ಮಂಡಳಿಯ ಅಧಿಕಾರಿಗಳು ಮತ್ತು ಉಸ್ತುವಾರಿ ನಿರ್ವಹಿಸುವ ಜಿಲ್ಲೆಗಳ ವಿವರಗಳನ್ನು ನೀಡಿದೆ. ಸಂಬಂಧಿಸಿದ ಶಾಲಾ ಮುಖ್ಯಸ್ಥರು ನಿಮ್ಮ ಜಿಲ್ಲೆಗೆ ಸಂಬಂಧಿಸಿದ ಅಧಿಕಾರಿಗಳ ಹೆಸರನ್ನು ಲಕೋಟೆಯ ಮೇಲೆ ತಪ್ಪದೇ ಬರೆಯಬೇಕು.

**ಸೆಪ್ಟಂಬರ್ 2021ರ ಎಸ್.ಎಸ್.ಎಲ್.ಸಿ. ಪೂರಕ ಪರೀಕ್ಷೆಗೆ ಕೆಳಕಂಡ ದಾಖಲೆಗಳನ್ನು ಶಾಲಾ ಮುಖ್ಯೋಪಾಧ್ಯಾಯರು ದಿನಾಂಕ: 07.09.2021 ರೊಳಗೆ ಸಲ್ಲಿಸುವುದು ಕಡ್ಡಾಯ.**

1. ಮುಖಪುಟ (Covering Letter)
2. ಶಾಲಾ ಲಾಗಿನ್ ಮುಖಾಂತರ ಮುದ್ರಿಸಿಕೊಂಡ ನಾಮಿನಲ್ ರೋಲ್ ಮತ್ತು ಆನ್‌ಲೈನ್ ಮುಖಾಂತರ ಚಲನ್ ಜನರೇಟ್ ಮಾಡಿಕೊಂಡು ಶುಲ್ಕ ಪಾವತಿಸಿದ ಮೂಲ ಚಲನ್ - (Original Online Challan).
3. 2003ಕ್ಕೂ ಹಿಂದಿನ ವರ್ಷಗಳ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿ ಸೆಪ್ಟಂಬರ್–2021ರ ಪೂರಕ ಪರೀಕ್ಷೆಗೆ ನೋಂದಾಯಿಸಿದ NSR/NSPR ಅಭ್ಯರ್ಥಿಗಳ ಎಂಎಸ್‌ಎ ಮತ್ತು ನಾಮಿನಲ್ ರೋಲ್ ಹಾಗೂ ಶುಲ್ಕ ಪಾವತಿಸಿದ ಮಂಡಳಿಯ ಮೂಲ ನೆಫ್ಟ್‌ಚಲನ್ ಸಲ್ಲಿಸುವುದು

| ಕ್ರ ಸಂ | ಶಾಖೆ | ಪರಿಶೀಲನಾ ಅಧಿಕಾರಿಗಳು ಶ್ರೀಮತಿ: ಶ್ರೀ | ಜಿಲ್ಲೆ | ದೂರವಾಣಿ ಸಂಖ್ಯೆ | ಕಛೇರಿಯ ದೂರವಾಣಿ |
|---|---|---|---|---|---|
| 1 | ಎಫ್ | ಹೆಚ್ ಎಸ್ ಸಂಧ್ಯಾ ಸಹಾಯಕ ನಿರ್ದೇಶಕರು | ಬೆಂಗಳೂರು ದಕ್ಷಿಣ / ಹಾವೇರಿ / ಶಿವಮೊಗ್ಗ | 9886846881 | 08023345579 / 08023344676 |

| | | | | | |
|---|---|---|---|---|---|
| 2 | ಜಿ | ಬಿ ನರೇಂದ್ರಕುಮಾರ್ ಸಹಾಯಕ ನಿರ್ದೇಶಕರು | ಬೆಂಗಳೂರು ಉತ್ತರ / ಚಿಕ್ಕಬಳ್ಳಾಪುರ / ಕೋಲಾರ | 9900190492 | 08023345579 / 08023344676 |
| 3 | ಹೆಚ್ | ಎಂ.ಎನ್.ಶ್ರೀನಿವಾಸ್ ಸಹಾಯಕ ನಿರ್ದೇಶಕರು | ಚಿತ್ರದುರ್ಗ/ದಾವಣಗೆರೆ/ ಬೆಂಗಳೂರು ಗ್ರಾಮಾಂತರ/ ರಾಮನಗರ | 9449052591 | 08023345579 / 08023344676 |
| 4 | ಐ | ಜಯರಾಮುಡು ಸಹಾಯಕ ನಿರ್ದೇಶಕರು | ಚಾಮರಾಜನಗರ/ಮಂಡ್ಯ/ ತುಮಕೂರು/ ಮಧುಗಿರಿ | 9449674952 | 08023345579 / 08023344676 |
| 5 | ಜೆ | ಬಾಗ್ಯವತಮ್ಮ ಸಹಾಯಕ ನಿರ್ದೇಶಕರು | ಮೈಸೂರು/ ಹಾಸನ/ ಚಿಕ್ಕಮಗಳೂರು/ ಕೊಡಗು | 9449812887 | 08023345579 / 08023344676 |
| 6 | ಕೆ | ಗಾಯಿತ್ರಿ ದೇವಿ ಹಿರಿಯ ಸಹಾಯಕ ನಿರ್ದೇಶಕರು | ಗದಗ/ ಕೊಪ್ಪಳ/ ಬಿಜಾಪುರ/ ಬಾಗಲಕೋಟೆ | 9986090437 | 08023345579 / 08023344676 |
| 7 | ಎಲ್ | ಜಯರಾಮುಡು ಸಹಾಯಕ ನಿರ್ದೇಶಕರು | ಧಾರವಾಡ/ ಚಿಕ್ಕೋಡಿ/ ಬೆಳಗಾವಿ | 9449674952 | 08023345579 / 08023344676 |
| 8 | ಎಂ | ಬಿ ನರೇಂದ್ರಕುಮಾರ್ ಸಹಾಯಕ ನಿರ್ದೇಶಕರು | ಮಂಗಳೂರು/ ಉಡುಪಿ/ ಕಾರವಾರ/ಶಿರಸಿ/ ರಾಯಚೂರು | 9900190492 | 08023345579 / 08023344676 |
| 9 | ಎನ್ | ಸಿ ವಿ ನಟರಾಜ್, ಹಿರಿಯ ಸಹಾಯಕ ನಿರ್ದೇಶಕರು | ಗುಲ್ಬರ್ಗಾ/ ಯಾದಗಿರಿ/ ಬೀದರ್/ ಬಳ್ಳಾರಿ | 7892937084 | 08023345579 / 08023344676 |

**4. ಪ್ರಶ್ನೆ ಪತ್ರಿಕೆ ಕುರಿತು :-**

- MCQ (Multiple Choice Question) ಬಹು ಆಯ್ಕೆ ಪ್ರಶ್ನೆ ಆಧಾರಿತ ಪರೀಕ್ಷೆಯನ್ನು ನಡೆಸಲಾಗುವುದು.
- ಪ್ರತಿ ವಿಷಯಕ್ಕೆ ಗರಿಷ್ಠ 40 ಅಂಕಗಳಿಗೆ ಸೀಮಿತಗೊಳಿಸಿ ಪರೀಕ್ಷೆಯನ್ನು ನಡೆಸಲಾಗುವುದು.
- ಒಟ್ಟು 03 ಕೋರ್ ವಿಷಯಗಳಿಗೆ 120 ಪ್ರಶ್ನೆಗಳುಳ್ಳ ಒಂದೇ ಪ್ರಶ್ನೆಪತ್ರಿಕೆ (ಪತ್ರಿಕೆ–1) ನೀಡಲಾಗುವುದು. ಇದರಲ್ಲಿ ಭಾಗ 1 ಗಣಿತ, ಭಾಗ 2 ವಿಜ್ಞಾನ ಮತ್ತು ಭಾಗ 3ರಲ್ಲಿ ಸಮಾಜ ವಿಜ್ಞಾನದ ಪ್ರಶ್ನೆಗಳಿರುತ್ತವೆ. ಪರೀಕ್ಷಾ ಸಮಯವನ್ನು ಬೆಳಿಗ್ಗೆ 10.30 ರಿಂದ 01.30 ಗಂಟೆಯವರೆಗೆ ನಿಗದಿಪಡಿಸಿ, ಒಟ್ಟು 3.00 ಗಂಟೆಯ ಕಾಲಾವಕಾಶ ನೀಡಲಾಗುವುದು.
- ಗಣಿತ ಮತ್ತು ವಿಜ್ಞಾನ ವಿಷಯಗಳ ಬದಲಾಗಿ ಪರ್ಯಾಯ ವಿಷಯಗಳನ್ನು ಆಯ್ಕೆ ಮಾಡಿಕೊಂಡ ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ಪತ್ರಿಕೆ–1ರಲ್ಲಿ ಭಾಗ–1 ಪರ್ಯಾಯ ವಿಷಯ–1, ಭಾಗ–2 ಪರ್ಯಾಯ ವಿಷಯ–2 ಮತ್ತು ಭಾಗ–3ರಲ್ಲಿ ಸಮಾಜ ವಿಜ್ಞಾನದ ಪ್ರಶ್ನೆಗಳಿರುತ್ತವೆ.
- ಒಟ್ಟು 03 ಭಾಷಾ ವಿಷಯಗಳಿಗೆ 120 ಪ್ರಶ್ನೆಗಳುಳ್ಳ ಒಂದೇ ಪ್ರಶ್ನೆಪತ್ರಿಕೆ (ಪತ್ರಿಕೆ–2) ನೀಡಲಾಗುವುದು. ಇದರಲ್ಲಿ ಭಾಗ 1 ಪ್ರಥಮ ಭಾಷೆ, ಭಾಗ 2 ದ್ವಿತೀಯ ಭಾಷೆ ಮತ್ತು ಭಾಗ 3ರಲ್ಲಿ ತೃತೀಯ ಭಾಷೆ / ಎನ್ಎಸ್‌ಕ್ಯೂಎಫ್ ವಿಷಯದ ಪ್ರಶ್ನೆಗಳಿರುತ್ತವೆ. ಪರೀಕ್ಷಾ ಸಮಯವನ್ನು ಬೆಳಿಗ್ಗೆ 10.30 ರಿಂದ 01.30 ಗಂಟೆಯವರೆಗೆ ನಿಗದಿಪಡಿಸಿ, ಒಟ್ಟು 3.00 ಗಂಟೆಯ ಕಾಲಾವಕಾಶ ನೀಡಲಾಗುವುದು.
- ಜೆಟಿಎಸ್ ವಿಷಯಗಳನ್ನು ಹೆಚ್ಚುವರಿಯಾಗಿ ಅಭ್ಯಾಸ ಮಾಡಿರುವ ವಿದ್ಯಾರ್ಥಿಗಳಿಗೆ ಪತ್ರಿಕೆ–3ರಲ್ಲಿ ಜೆಟಿಎಸ್ ವಿಷಯಗಳ ಪ್ರಶ್ನೆಪತ್ರಿಕೆಗಳಿರುತ್ತವೆ.
- ಕೋರ್ ಮತ್ತು ಭಾಷಾ ವಿಷಯಗಳ ಪರೀಕ್ಷೆಗಳ ನಡುವೆ ಅಂತರ ನೀಡಲಾಗುವುದು.

- CCERF (2020-21 ನೇ ಸಾಲಿನ ಮುಖ್ಯ ಪರೀಕ್ಷೆಗೆ ನೋಂದಾಯಿಸಿ ಕೋವಿಡ್-19 ಮತ್ತು ಇತರೆ ಅನಾರೋಗ್ಯದ ಕಾರಣದಿಂದ ಪರೀಕ್ಷೆಗೆ ಗೈರುಹಾಜರಾದ ಮತ್ತು ನೋಂದಾಯಿಸದ ಅರ್ಹ ಶಾಲಾ ವಿದ್ಯಾರ್ಥಿಗಳು ಮಾತ್ರ), CCEPF (2020-21 ನೇ ಸಾಲಿನ ಮುಖ್ಯ ಪರೀಕ್ಷೆಗೆ ನೋಂದಾಯಿಸಿ ಕೋವಿಡ್-19 ಮತ್ತು ಇತರೆ ಅನಾರೋಗ್ಯದ ಕಾರಣದಿಂದ ಪರೀಕ್ಷೆಗೆ ಗೈರುಹಾಜರಾದ ಅರ್ಹ ಖಾಸಗಿ ಅಭ್ಯರ್ಥಿಗಳು ಮಾತ್ರ), ಅರ್ಹ CCERR , CCEPR, NSR ಮತ್ತು NSPR ವಿದ್ಯಾರ್ಥಿಗಳಿಗೂ ಸಹ ಈ ವಿಧಾನ ಅನ್ವಯವಾಗುತ್ತದೆ.

**5. OMR (Optical Mark Reader) ಉಪಯೋಗಿಸಿ ಉತ್ತರಿಸುವ ಕುರಿತು:-**

- ಉತ್ತರ ಪತ್ರಿಕೆಯು OMR (Optical Mark Reader) ರೂಪದಲ್ಲಿರುತ್ತದೆ.
- ಪ್ರತಿಯೊಂದು ವಿಷಯಕ್ಕೂ ಪ್ರತ್ಯೇಕವಾದ ಓಎಂಆರ್ ಶೀಟ್ ನೀಡಲಾಗುವುದು.
- ಸದರಿ ಓಎಂಆರ್ (OMR) ಶೀಟ್‌ನಲ್ಲಿ 120 ವಸ್ತುನಿಷ್ಠ ಪ್ರಶ್ನೆಗಳಿಗೆ ಶೇಡಿಂಗ್ ಮಾಡುವ ಮೂಲಕ ಉತ್ತರಿಸಲು ಅವಕಾಶ ನೀಡಲಾಗುವುದು.
- OMR ಶೀಟ್‌ನ ಮುಖ ಪುಟದಲ್ಲಿ ವಿದ್ಯಾರ್ಥಿಯ ಭಾವಚಿತ್ರದೊಂದಿಗೆ ಪೂರ್ಣ ವಿವರವಿರುತ್ತದೆ ಹಾಗೂ ಪ್ರಶ್ನೆಗಳಿಗೆ ಉತ್ತರಿಸಲು ಶೇಡಿಂಗ್ ಮಾಡುವ ಅವಕಾಶವಿರುತ್ತದೆ.
- ನಾಮಯಾದಿ ಪಟ್ಟಿಯಲ್ಲಿಯೂ ಸಹ ವಿದ್ಯಾರ್ಥಿಯ ಭಾವಚಿತ್ರದೊಂದಿಗೆ ಪೂರ್ಣ ವಿವರವಿರುತ್ತದೆ.

**6. ಫಲಿತಾಂಶ ಪ್ರಕಟಣೆ ಕುರಿತು :-**

**2020-21ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಗೆ ನೋಂದಾಯಿಸಿ ಹಾಜರಾಗುವ CCERF, CCEPF, CCERR, CCEPR, NSR & NSPR ವಿದ್ಯಾರ್ಥಿಗಳಿಗೆ, ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ ಪರೀಕ್ಷೆ ಬರೆದು ಪಡೆಯುವ ಅಂಕಗಳನ್ನು ಆಧರಿಸಿ ನಿಯಮಾನುಸಾರ ಫಲಿತಾಂಶ ಪ್ರಕಟಿಸಲಾಗುವುದು.**

**CCERF & CCERR**

- ಎಲ್ಲಾ 06 ವಿಷಯಗಳಿಗೆ ತಲಾ 40 ಅಂಕಗಳಿಗೆ ಪರೀಕ್ಷೆ ನಡೆಸುವುದರಿಂದ, ಪ್ರಥಮ ಭಾಷೆಗೆ ಗರಿಷ್ಠ 100 ಅಂಕಗಳಿಗೆ ಹಾಗೂ ಉಳಿದ 5 ವಿಷಯಗಳಿಗೆ ಗರಿಷ್ಠ 80 ಅಂಕಗಳಿಗೆ ಪರಿವರ್ತಿಸಿ, ಪ್ರತಿ ವಿಷಯದಲ್ಲಿ ವಿದ್ಯಾರ್ಥಿಯು ಪಡೆದ ಅಂಕಗಳನ್ನು ಅದಕ್ಕೆ ಅನುಗುಣವಾಗಿ ಪರಿವರ್ತಿಸಲಾಗುವುದು. ಇದರ ಜೊತೆಗೆ ಆಂತರಿಕ ಅಂಕಗಳನ್ನು ಸೇರ್ಪಡಿಸಿ ಒಟ್ಟಾರೆ ಗರಿಷ್ಠ 625 ಅಂಕಗಳಿಗೆ ಪ್ರಸ್ತುತ ನಿಯಮದಂತೆ ಫಲಿತಾಂಶ ಪ್ರಕಟಿಸಲಾಗುವುದು. ಜೆಟಿಎಸ್ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಗರಿಷ್ಠ 825 ಅಂಕಗಳಿಗೆ ಪ್ರಸ್ತುತ ನಿಯಮದಂತೆ ಫಲಿತಾಂಶ ಪ್ರಕಟಿಸಲಾಗುವುದು.

**CCEPF, CCEPR, NSR & NSPR**

- ಎಲ್ಲಾ ವಿಷಯಗಳಿಗೆ ತಲಾ 40 ಅಂಕಗಳಿಗೆ ಪರೀಕ್ಷೆ ನಡೆಸುವುದರಿಂದ, ಪ್ರಥಮ ಭಾಷೆಗೆ ಗರಿಷ್ಠ 125 ಅಂಕಗಳಿಗೆ ಹಾಗೂ ಉಳಿದ 5 ವಿಷಯಗಳಿಗೆ ಗರಿಷ್ಠ 100 ಅಂಕಗಳಿಗೆ ಪರಿವರ್ತಿಸಿ, ಪ್ರತಿ ವಿಷಯದಲ್ಲಿ ವಿದ್ಯಾರ್ಥಿಯು ಪಡೆದ ಅಂಕಗಳನ್ನು ಅದಕ್ಕೆ ಅನುಗುಣವಾಗಿ ಪರಿವರ್ತಿಸಿ, ಒಟ್ಟಾರೆ 625 ಅಂಕಗಳಿಗೆ ಪ್ರಸ್ತುತ ನಿಯಮದಂತೆ ಫಲಿತಾಂಶ ಪ್ರಕಟಿಸಲಾಗುವುದು.

**CCERF (2020-21 ನೇ ಸಾಲಿನ ಮುಖ್ಯ ಪರೀಕ್ಷೆಗೆ ನೋಂದಾಯಿಸಿ ಕೋವಿಡ್-19 ಮತ್ತು ಇತರೆ ಅನಾರೋಗ್ಯದ ಕಾರಣದಿಂದ ಪರೀಕ್ಷೆಗೆ ಗೈರುಹಾಜರಾದ ಮತ್ತು ನೋಂದಾಯಿಸದ ಅರ್ಹ ಶಾಲಾ ವಿದ್ಯಾರ್ಥಿಗಳು ಮಾತ್ರ), CCEPF (2020-21 ನೇ ಸಾಲಿನ ಮುಖ್ಯ ಪರೀಕ್ಷೆಗೆ ನೋಂದಾಯಿಸಿ ಕೋವಿಡ್-19 ಮತ್ತು ಇತರೆ ಅನಾರೋಗ್ಯದ ಕಾರಣದಿಂದ ಪರೀಕ್ಷೆಗೆ ಗೈರುಹಾಜರಾದ ಅರ್ಹ ಖಾಸಗಿ ಅಭ್ಯರ್ಥಿಗಳು ಮಾತ್ರ) ಈ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತೆ, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಕೆಳಕಡಂತೆ ಶ್ರೇಣಿ (ಗ್ರೇಡ್) ನೀಡಲಾಗುವುದು.**

| ಶೇಕಡಾ | ಶ್ರೇಣಿ |
|---|---|
| 90 ರಿಂದ 100 | ಎ+ |
| 80 ರಿಂದ 89ರವರೆಗೆ | ಎ |
| 60 ರಿಂದ 79ರವರೆಗೆ | ಬಿ |
| 35 ರಿಂದ 59ರವರೆಗೆ | ಸಿ |

**ಉಳಿದಂತೆ ಹಿಂದಿನ ಸಾಲುಗಳಲ್ಲಿ ಅನುತ್ತೀರ್ಣರಾಗಿ 2020-21ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಗೆ ನೋಂದಾಯಿಸಿ ಪರೀಕ್ಷೆಗೆ ಹಾಜರಾಗುವ ಅರ್ಹ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತೆ ಮಾತ್ರ ಹಿಂದಿನ ವರ್ಷಗಳಲ್ಲಿ ನೀಡುತ್ತಿದ್ದಂತೆ 6 ಗ್ರೇಡ್‌ಗಳನ್ನು ನೀಡಿ ಫಲಿತಾಂಶ ನೀಡಲಾಗುವುದು.**

**7. ಇತರೆ ವಿಷಯಗಳು :-**

- 2020-21ನೇ ಸಾಲಿನ ಪೂರಕ ಪರೀಕ್ಷೆಗೆ ನೋಂದಾಯಿಸಿಕೊಂಡಿರುವ ವಿದ್ಯಾರ್ಥಿಗಳಿಗೆ ಮಾತ್ರ ಮೇಲ್ಕಂಡ ಕ್ರಮಗಳು ಅನ್ವಯವಾಗತಕ್ಕದ್ದು.
- ಕೋವಿಡ್-19 ಕಾರಣದಿಂದ ಅಥವಾ ಇತರೆ ಆನಾರೋಗ್ಯದ ಕಾರಣದಿಂದ 2020-21ನೇ ಸಾಲಿನ ಮುಖ್ಯ ಪರೀಕ್ಷೆಗೆ ನೋಂದಾಯಿಸಿ ಗೈರುಹಾಜರಾದಂತಹ (CCERF ಮತ್ತು CCEPF) ವಿದ್ಯಾರ್ಥಿಗಳು, ಈ ಪೂರಕ ಪರೀಕ್ಷೆಗೆ ನೋಂದಾಯಿಸಿಕೊಂಡು ಹಾಜರಾದಲ್ಲಿ **ಪ್ರಥಮ ಅವಕಾಶವೆಂದು** ಪರಿಗಣಿಸಿ ಅನುಮತಿ ನೀಡಲಾಗಿರುತ್ತದೆ. ಇಂತಹ ವಿದ್ಯಾರ್ಥಿಗಳು ಒಂದು ವೇಳೆ ಈ ಪೂರಕ ಪರೀಕ್ಷೆಯಲ್ಲಿ ಗೈರುಹಾಜರಾದಲ್ಲಿ ಅಥವಾ ಪರೀಕ್ಷೆ ತೆಗೆದುಕೊಳ್ಳದೆ ಇದ್ದಲ್ಲಿ ಮುಂದಿನ ಪರೀಕ್ಷೆಯಲ್ಲಿ ಇಂತಹ ವಿದ್ಯಾರ್ಥಿಗಳನ್ನು **ಪುನರಾವರ್ತಿತ ವಿದ್ಯಾರ್ಥಿಗಳೆಂದೇ** ಪರಿಗಣಿಸಲಾಗುವುದು.
- ಕೋವಿಡ್-19 ಕಾರಣದಿಂದ ಅಥವಾ ಇತರೆ ಅನಾರೋಗ್ಯದ ಕಾರಣದಿಂದ ಜುಲೈ 2021ರ ಮಾಹೆಯಲ್ಲಿ ನಡೆದ ಮುಖ್ಯ ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗಿಲ್ಲ ಎಂಬುದರ ಬಗ್ಗೆ ವಿದ್ಯಾರ್ಥಿಗಳ ಪೋಷಕರಿಂದ ಲಿಖಿತ ಹೇಳಿಕೆ ಪಡೆದುಕೊಂಡು ಶಾಲೆಯಲ್ಲಿ ಸಂರಕ್ಷಿಸಿಡುವುದು.
- 2020-21 ನೇ ಸಾಲಿನ ಮುಖ್ಯ ಪರೀಕ್ಷೆಗೆ ನೋಂದಣಿಯಾಗದ ಖಾಸಗಿ ಅಭ್ಯರ್ಥಿಗಳು (CCEPF) ಪೂರಕ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ ಮತ್ತು ಪೂರಕ ಪರೀಕ್ಷೆಗೆ ಹೊಸದಾಗಿ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಲು ಅವಕಾಶವಿರುವುದಿಲ್ಲ.

- ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ನಿಯಮಾನುಸಾರ ಹೆಚ್ಚುವರಿ ಪರೀಕ್ಷಾ ಸಮಯ ನೀಡಲಾಗುವುದು.
- 2020-21ನೇ ಸಾಲಿನ ಸೆಪ್ಟಂಬರ್ ಮಾಹೆಯಲ್ಲಿ ನಡೆಯಲಿರುವ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಗೆ ಸಂಬಂಧಪಟ್ಟಂತೆ ಛಾಯಾಪ್ರತಿ, ಮರು ಎಣಿಕೆ ಮತ್ತು ಮರು ಮೌಲ್ಯಮಾಪನ ಇರುವುದಿಲ್ಲ.

ಮೇಲ್ಕಂಡ ಅಂಶಗಳನ್ನೂ ಒಳಗೊಂಡಂತೆ ಉಲ್ಲೇಖಿತ ಸರ್ಕಾರಿ ಆದೇಶದಲ್ಲಿನ ಎಲ್ಲಾ ಅಂಶಗಳು ಹಾಗೂ ಸೂಚನೆಗಳನ್ವಯ ಕ್ರಮಕೈಗೊಳ್ಳಲು ಸೂಚಿಸಿದೆ.

**ವಿಶೇಷ ಸೂಚನೆ: ಈ ಅಧಿಸೂಚನೆಯಲ್ಲಿ ವಿವರಿಸಿರುವ ಎಲ್ಲಾ ಅಂಶಗಳನ್ನು ಅರ್ಥೈಸಿಕೊಂಡು ಅರ್ಹ ವಿದ್ಯಾರ್ಥಿಗಳ/ಪೋಷಕರ ಗಮನಕ್ಕೆ ಈ ಎಲ್ಲಾ ಮಾಹಿತಿಗಳನ್ನು ತಂದು ಸೆಪ್ಟಂಬರ್-2021ರ ಪೂರಕ ಪರೀಕ್ಷೆಗೆ ನಿಗದಿತ ಸಮಯದೊಳಗೆ ನೋಂದಾಯಿಸಲು ಅಗತ್ಯ ಕ್ರಮಕೈಗೊಳ್ಳಲು ತಿಳಿಸಿದೆ.**

ಕಾರ್ಯದರ್ಶಿಗಳು : 080-23445579
ಉಪನಿರ್ದೇಶಕರು (ಆಡಳಿತ) : 080-23562267
ಲೆಕ್ಕಾಧಿಕಾರಿಗಳು : 080-23561271

(ವಿ. ಸುಮಂಗಲ)
ನಿರ್ದೇಶಕರು, ಪರೀಕ್ಷೆಗಳು

**ಪ್ರತಿಯನ್ನು ಈ ಕೆಳಕಂಡವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.**

1. ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅಂಗೀಕೃತ ಪ್ರೌಢ ಶಾಲೆ/ಸಂಯುಕ್ತ ಪದವಿ ಪೂರ್ವ ಕಾಲೇಜು ಮುಖ್ಯಸ್ಥರುಗಳಿಗೆ (ಮಂಡಳಿಯ ಜಾಲತಾಣದ ಶಾಲಾ ಲಾಗಿನ್ ಮೂಲಕ)
2. ರಾಜ್ಯದ ಎಲ್ಲಾ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಕ್ರಮಕ್ಕಾಗಿ (ಇಮೇಲ್ ಮೂಲಕ)
3. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಉಪ ನಿರ್ದೇಶಕರ ಕಚೇರಿಯಲ್ಲಿ ನಾಮಾಂಕಿತರಾದ ಎಸ್.ಎಸ್.ಎಲ್.ಸಿ. ಪರೀಕ್ಷಾ ನೋಡಲ್ ಅಧಿಕಾರಿಯವರ ಮುಂದಿನ ಸೂಕ್ತ ಕ್ರಮಕ್ಕಾಗಿ. (ಇಮೇಲ್ ಮತ್ತು ಇಓ ಲಾಗಿನ್ ಮೂಲಕ)
4. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ತಾಲ್ಲೂಕು ನೋಡಲ್ ಅಧಿಕಾರಿಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ. (ಇಮೇಲ್ ಮತ್ತು ಬಿಇಓ ಲಾಗಿನ್ ಮೂಲಕ)
5. ಮಂಡಳಿಯ ಬಿ, ಸಿ ಮತ್ತು ಲೆಕ್ಕಪತ್ರಶಾಖೆ ಶಾಖಾಧಿಕಾರಿಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
6. ಶಾಖಾಧಿಕಾರಿಗಳು, ಗಣಕಶಾಖೆರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಹಾಗೂ ಮಂಡಳಿಯ ಜಾಲತಾಣ, ಇಓ ಲಾಗಿನ್, ಬಿಇಓ ಲಾಗಿನ್ ಮತ್ತು ಶಾಲಾ ಲಾಗಿನ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
7. ಉಪನಿರ್ದೇಶಕರು (ಆಡಳಿತ)ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
8. ನಿರ್ದೇಶಕರು (ಪರೀಕ್ಷೆಗಳು) / ಕಾರ್ಯದರ್ಶಿಗಳ ಆಪ್ತ ಶಾಖೆಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ,
9. ಎಲ್ಲಾ ಪರಿಶೀಲನಾ ಶಾಖೆಗಳ ಶಾಖಾಧಿಕಾರಿಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
10. ಶಿಕ್ಷಣ ವಾರ್ತೆ
11. ಕಛೇರಿ ಪ್ರತಿ.

**ಪ್ರತಿಯನ್ನು ಗೌರವಪೂರ್ವಕವಾಗಿ:-**

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ.